**ಓ.ಎಸ್. ನಂಃ 80/2016**

**ಪಿ. ಡಬ್ಲ್ಯೂಃ 1**

**ದಿನಾಂಕ 03.12.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 12 ನೇ ಪ್ರತಿವಾದಿಯ ಪರ ಃ ಶ್ರೀ.ಪಿ.ಡಿ. ವಕೀಲರಿಂದಃ**

1. ಬಸವೇಗೌಡ ಇವರು ನನ್ನ ಗಂಡನ ತಂದೆ ಅಂದರೆ ನನ್ನ ಮಾವನಾಗಿರುತ್ತಾರೆ. ನನ್ನ ಮಾವನಾದ ಬಸವೇಗೌಡರಿಗೆ ಒಟ್ಟು 6 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಮಾವನಾದ ಬಸವೇಗೌಡರಿಗೆ ಹೊಸೂರು ಕಲ್ಲಹಳ್ಳಿಯಲ್ಲಿ ಅಂದಾಜು 20 ಎಕರೆ ಜಮೀನು ಇತ್ತು. ನನ್ನ ಮಾವನಾದ ಬಸವೇಗೌಡರ ಹೊಸೂರು ಕಲ್ಲಹಳ್ಳಿಯಲ್ಲಿ ಇರುವ ಆಸ್ತಿಗಳನ್ನು ನಾವೆಲ್ಲಾ ವಿಭಾಗ ಮಾಡಿಕೊಂಡಿರುತ್ತೇವೆ ಆದರೆ ವಿಭಾಗ ಪತ್ರವು ಇನ್ನೂ ಸಹ ನೋಂದಣಿ ಆಗಿರುವುದಿಲ್ಲ. ಆದರೆ ನನ್ನ ಗಂಡನ ಹಿಸ್ಸೆಗೆ ಬಂದ ಆಸ್ತಿಗಳು ನನ್ನ ಗಂಡನ ಮರಣದ ನಂತರ ನನ್ನ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ. ನನ್ನ ಮಾವನಾದ ಬಸವೇಗೌಡರಿಗೆ ಸೇರಿದ ಎಲ್ಲಾ ಆಸ್ತಿಗಳ ಖಾತೆಯು ಸಹ ನನ್ನ ಹೆಸರಿನಲ್ಲಿಯೇ ಇದೆ.

2. ಹೊಸೂರು ಕಲ್ಲಹಳ್ಳಿಯಲ್ಲಿ ನನ್ನ ಮಾವನಾದ ಬಸವೇಗೌಡರಿಗೆ ಇರುವ 20 ಎಕರೆ ಜಮೀನು ಯಾವೆಲ್ಲಾ ಸರ್ವೇ ನಂಬರುಗಳಲ್ಲಿ ಇವೆ ಎಂದು ನನಗೆ ಗೊತ್ತಿಲ್ಲ. ನಾನು 29 ಗುಂಟೆ ಜಮೀನಿನ ಸಂಬಂಧ ಈ ದಾವೆಯನ್ನು ಹೂಡಿರುತ್ತೇನೆ. ನನ್ನ ಮಾವನಾದ ಬಸವೇಗೌಡರು ಖರೀದಿಸಿರುತ್ತಾರೆ. ದಾವಾ ಐಟಂ ನಂ.2 ರ ಆಸ್ತಿಯ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

3. ದಾವಾ ಐಟಂ ನಂ.1 ಮತ್ತು 2 ರ ಆಸ್ತಿಗಳು ಇವೆರಡು ಬೇರೆ ಬೇರೆ ಆಸ್ತಿಗಳು ಎಂದರೆ ಸರಿ. ದಾವಾ ಐಟಂ ನಂ.1 ರ ಆಸ್ತಿಯನ್ನು ಸಹ ನನ್ನ ಮಾವನಾದ ಬಸವೇಗೌಡರು ಖರೀದಿಸಿರುತ್ತಾರೆ. ಐಟಂ ನಂ.1 ರ ಆಸ್ತಿಯ ಕ್ರಯ ಪತ್ರವನ್ನು ನಾನು

ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಐಟಂ ನಂ.1 ಮತ್ತು 2 ರ ಆಸ್ತಿಗಳು ಇವೆರಡು ಅಕ್ಕ-ಪಕ್ಕದಲ್ಲಿವೆ ಎಂದರೆ ಸರಿ.

4. ದಾವಾ ಐಟಂ ನಂ.2 ರ ಆಸ್ತಿಯನ್ನು ನಾವು ಇಲ್ಲಿಯವರೆಗೂ ವಿಭಾಗ ಮಾಡಿಕೊಂಡಿರುವುದಿಲ್ಲ. ಹೊಸೂರು ಕಲ್ಲಹಳ್ಳಿಯಲ್ಲಿ ಇರುವ ನನ್ನ ಮಾವನ ಆಸ್ತಿಗಳನ್ನು ವಿಭಾಗ ಮಾಡಿಕೊಂಡ 10 ವರ್ಷಗಳ ಬಳಿಕ ನಮಗೆ ದಾವಾ ಐಟಂ ನಂ.2 ರ ಆಸ್ತಿಯ ದಾಖಲೆಗಳು ಸಿಕ್ಕಿದ ಕಾರಣ ನಾವು ನನ್ನ ಮಾವನ ಇತರ ಆಸ್ತಿಗಳೊಂದಿಗೆ ದಾವಾ ಐಟಂ ನಂ.2 ರ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ದಾವಾ ಐಟಂ ನಂ.2 ರ ಆಸ್ತಿಗಳಲ್ಲಿ ಹಲವಾರು ನಿವೇಶನಗಳನ್ನು ಮಾಡಿದ್ದು, ದಾವಾ ಐಟಂ ನಂ.2 ರ ಆಸ್ತಿಯಲ್ಲಿ ಮಾಡಿರುವ ಸದರಿ ನಿವೇಶನಗಳಲ್ಲಿ ಬೇರೆ ಬೇರೆ ವ್ಯಕ್ತಿಗಳು ತಮ್ಮ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸರಿ.

5. ನನ್ನ ಮಾವನಾದ ಬಸವೇಗೌಡರು ಮರಣ ಹೊಂದಿ ಅಂದಾಜು 25 ವರ್ಷಗಳಾಗಿರಬಹುದು. ತಮ್ಮ ಜೀವಿತಾವಧಿಯಲ್ಲಿ ದಾವಾ ಐಟಂ ನಂ.2 ರ ಆಸ್ತಿಗಳಲ್ಲಿ ನಿವೇಶಗಳನ್ನು ಮಾಡಿ ಸದರಿ ನಿವೇಶನಗಳನ್ನು ನನ್ನ ಮಾವನಾದ ಬಸವೇಗೌಡರೇ ಹಲವಾರು ವ್ಯಕ್ತಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.2 ರ ಆಸ್ತಿಗಳಲ್ಲಿರುವ ಮನೆಯ ಮಾಲೀಕರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಹೊಸೂರು ಕಲ್ಲಹಳ್ಳಿಯಲ್ಲಿರುವ ನನ್ನ ಮಾವನಾದ ಬಸವೇಗೌಡರಿಗೆ ಸೇರಿದ ಆಸ್ತಿಗಳನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ.

6. ನನ್ನ ಮಾವನಾದ ಬಸವೇಗೌಡರ ಜೀವಿತಾವಧಿಯಲ್ಲಿಯೇ ದಾವಾ ಐಟಂ ನಂ.1 ರ ಆಸ್ತಿಯ ಖಾತೆಯು ಪ್ರತಿವಾದಿ ಸಂಖ್ಯೆ 1 ರಿಂದ 9 ರವರ ಹೆಸರಿನಲ್ಲಿತ್ತು ಎಂದರೆ ಸರಿ. ನಂತರದಲ್ಲಿ 1 ರಿಂದ 9 ನೇ ಪ್ರತಿವಾದಿಯರು ದಾವಾ ಐಟಂ ನಂ.1 ರ ಆಸ್ತಿಯನ್ನು 12 ನೇ ಪ್ರತಿವಾದಿಗೆ ದಿನಾಂಕ 07.12.2013 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.1 ರ ಆಸ್ತಿಯು 1 ರಿಂದ 9 ನೇ ಪ್ರತಿವಾದಿಯರ ಹಿಸ್ಸೆಗೆ ಹೋದ ಆಸ್ತಿ ಆಗಿರುತ್ತದೆ ಎಂದರೆ ಸರಿ. ಅದೇ ರೀತಿ ದಾವಾ ಐಟಂ ನಂ.2 ರ

ಆಸ್ತಿಯು ವಾದಿಯರಿಗೆ ಮತ್ತು ಪ್ರತಿವಾದಿ ಸಂಖ್ಯೆ 10 ಮತ್ತು 11 ರವರಿಗೆ ಸೇರಿದ ಆಸ್ತಿ ಆಗಿರುತ್ತದೆ ಎಂದರೆ ಸರಿ. ಆದ್ದರಿಂದ ದಾವಾ ಐಟಂ ನಂ.1 ರ ಆಸ್ತಿಯ ಮೇಲೆ ವಾದಿಯರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**